# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2310
ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 21-03-2022
ಉತ್ತರಿಸುವ ಸಚಿವರು : ಮಾನ್ಯ ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗದಗ ಜಿಲ್ಲೆಯಲ್ಲಿ ಜೀವನೋಪಾಯಕ್ಕಾಗಿ ಅರಣ್ಯ ಭೂಮಿಯನ್ನು ಉಳಿಮೆ ಮಡುತ್ತಿರುವವರಿಗೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಇರುವ ಸಮಸ್ಯೆಗಳೇನು; | ದಿನಾಂಕ 27.04.1978ಕ್ಕಿಂತ ಪೂರ್ವದಲ್ಲಿ ಆದ ಅರಣ್ಯ ಭೂಮಿಯ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಕುರಿತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ಎಫ್‌ಇಇ 5 ಎಫ್ ಜಿಎಲ್ 90, ಬೆಂಗಳೂರು ದಿನಾಂಕ 05.05.1997 ಹಾಗೂ ಅಪಜೀ 21 ಎಫ್ ಜಿಎಲ್ 2004, ಬೆಂಗಳೂರು ದಿನಾಂಕ 06.2.2004ರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಗದಗ ಜಿಲ್ಲೆಯಲ್ಲಿ ಈಗಾಗಲೇ ದಿನಾಂಕ 27.04.1978ಕ್ಕಿಂತ ಪೂರ್ವದ ಅತೀಕ್ರಮಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 628 ಪ್ರಕರಣಗಳಲ್ಲಿ 112 ಪ್ರಕರಣಗಳನ್ನು ಜಿಲ್ಲಾಧಿಕಾರಿಗಳು ಸಮಿತಿಯಲ್ಲಿ ಸಕ್ರಮಾತಿಗೊಳಿಸಿದ್ದು, 74 ಪ್ರಕರಣಗಳನ್ನು ತಿರಸ್ಕೃತಗೊಳಿಸಿದ್ದು, 442 ಪ್ರಕರಣಗಳು ಇತ್ಯರ್ಥಗೊಳ್ಳಲು ಬಾಕಿ ಇರುತ್ತದೆ.<br><br>ದಿನಾಂಕ 27.04.1978ರ ನಂತರದಲ್ಲಿ ಆದ ಅರಣ್ಯ ಅತೀಕ್ರಮಣ ಪ್ರಕರಣಗಳನ್ನು ಸಕ್ರಮಾತಿಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಅವುಗಳನ್ನು ನಿಯಮಾನುಸಾರ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 64ಎ ಪ್ರಕಾರ ನಡಾವಳಿ ನಡೆಸಿ ಅಂತಿಮ ಆದೇಶ ಹೊರಡಿಸಿದ ನಂತರ ನಿಯಮಾನುಸಾರ ಅತಿಕ್ರಮಣ ತೆರವುಗೊಳಿಸಲಾಗುತ್ತಿದೆ. |
| ಆ) | ಅರಣ್ಯ ಹಕ್ಕು ಕಾಯಿದೆ 2005ರ ಅನ್ವಯ ಅರಣ್ಯ ಭೂಮಿ ಉಳಿಮೆ ಮಾಡುವವರನ್ನು ತೆರವುಗೊಳಿಸಬಾರದೆಂದು ಆದೇಶ | ಅರಣ್ಯ ಹಕ್ಕು ಕಾಯ್ದೆ 2006ರಡಿಯಲ್ಲಿ ಗದಗ ಅರಣ್ಯ ವಿಭಾಗದಲ್ಲಿ 2368 ಅರ್ಜಿಗಳನ್ನು ಸಲ್ಲಿಸಿದ್ದು, ಆದರಲ್ಲಿ ಈಗಾಗಲೇ 619 ಪ್ರಕರಣಗಳಿಗೆ ಜಿಲ್ಲಾ ಮಟ್ಟದ |

| | | |
|---|---|---|
| | ಇದ್ದರೂ, ತೆರವುಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸಮಿತಿಯಿಂದ ಅರಣ್ಯ ಹಕ್ಕು ಪತ್ರ ನೀಡಲಾಗಿರುತ್ತದೆ. ಒಟ್ಟು 1387 ಪ್ರಕರಣಗಳನ್ನು ವಿವಿಧ ಕಾರಣಗಳಿಂದಾಗಿ ಜಿಲ್ಲಾ ಮಟ್ಟದ ಸಮಿತಿಯು ತಿರಸ್ಕರಿಸಿದ್ದು, 362 ಪ್ರಕರಣಗಳು ಇತ್ಯರ್ಥಗೊಳ್ಳಲು ಬಾಕಿ ಇರುತ್ತದೆ.<br>ಅರಣ್ಯ ಹಕ್ಕು ಕಾಯ್ದೆ 2006ರಡಿ ಇತ್ಯರ್ಥಗೊಳಿಸಲು ಬಾಕಿಯಿರುವ ಪ್ರಕರಣಗಳ ಅತಿಕ್ರಮಣಗಳನ್ನು ತೆರವುಗೊಳಿಸಿರುವುದಿಲ್ಲ. |
| ಇ) | ಮುಂಡರಗಿ ತಾಲ್ಲೂಕು ಕೆರೂರು ಗ್ರಾಮದಲ್ಲಿ ಅರಣ್ಯ ಭೂಮಿಯನ್ನು ತೆರವು ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಈ) | ಈ ಸಂಬಂಧವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಅರಣ್ಯ ಕಾಯಿದೆ 20005ರ ಪ್ರಕಾರ ಭೂಮಿ ಮಂಜೂರು ಮಾಡಲು ಸಾಧ್ಯವಾಗದಿರಲು ಕಾರಣವೇನು? | ಮುಂಡರಗಿ ತಾಲ್ಲೂಕು ಕೆರೂರು ಗ್ರಾಮದ ಅರಣ್ಯ ಸರ್ವೆ ನಂ.56, 57 ಮತ್ತು 58ಗಳು ದಿನಾಂಕ 27.04.1978ರ ನಂತರದ ಅತಿಕ್ರಮಣ ಪ್ರಕರಣಗಳಾಗಿದ್ದು, ನಿಯಮಾನುಸಾರ ಅಂದರೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 64-ಎ ಪ್ರಕಾರ ನಡಾವಳಿ ನಡೆಸಿ ಅಂತಿಮ ಆದೇಶ ಹೊರಡಿಸಿ ಅತಿಕ್ರಮಣ ತೆರವುಗೊಳಿಸಲಾಗುತ್ತಿದೆ. ದಿನಾಂಕ 27.04.1978ರ ನಂತರ ಅತಿಕ್ರಮಣಗಳಿಗೆ ಭೂಮಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಅಲ್ಲದೇ, ಈ ಅತಿಕ್ರಮಣದಾರರು ಅರಣ್ಯ ಹಕ್ಕು ಕಾಯ್ದೆ 2006ರ ಪ್ರಕಾರ ಅರ್ಜಿಯನ್ನು ಕೂಡ ಸಲ್ಲಿಸಿರುವುದಿಲ್ಲ. |

ಸಂಖ್ಯೆ: ಅಪಜೀ 18 FGL 2022 (ಇ)

(ಉಮೇಶ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು